**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 33K– ದ್ವಿತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** **ಸಮಯ : 03.00ಗಂಟೆಗಳು**

****************************************************************************************

## ಅಭ್ಯಾಸ ಪತ್ರಿಕೆ–1

****************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4X1=4**

1. ಸವರ್ಣದೀರ್ಘ ಸಂಧಿಗೆ ಉದಾಹರಣೆಯಾಗಿರುವ ಪದ.
   ಎ) ಒಬ್ಬೊಬ್ಬರು ಬಿ) ಮಹಾನುಭಾವ
   ಸಿ) ಬಲಗಡಲು ಡಿ) ಬೇಟೆಯಾಡು
2. 'ಬಾಂದಳ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.
   ಎ) ಮೂರು ಬಿ) ನಾಲ್ಕು
   ಸಿ) ಐದು ಡಿ) ಆರು
3. ಹೊಂಬಾಳೆ ಪದದಲ್ಲಿ ಕಂಡುಬರುವ ಸಮಾಸ.
   ಎ) ದ್ವಿಗು ಸಮಾಸ ಬಿ) ಕ್ರಿಯಾಸಮಾಸ
   ಸಿ) ಕರ್ಮಧಾರೆಯ ಸಮಾಸ ಡಿ) ತತ್ಪುರುಷ ಸಮಾಸ
4. ಸಂಬಧಾರ್ಥಕ ಅವ್ಯಯಕ್ಕೆ ಉದಾಹರಣೆಯಾದ ಪದವಿದು.
   ಎ) ಚೆನ್ನಾಗಿ ಬಿ) ಅಯ್ಯೋ
   ಸಿ) ನಾನೇ ಡಿ) ಮತ್ತು

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12X1=12**

5. ಖಡ್ಗಕ್ಕಿಂತ ಹರಿತವಾದುದು ಯಾವುದು?
6. ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡರು?
7. ಹಕ್ಕಿಗಳು ಎಲ್ಲಿ ಆಶ್ರಯ ಪಡೆಯುತ್ತವೆ?
8. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ?
9. ಥೇಮ್ಸ್ ನದಿಯ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ?
10. ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?
11. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?
12. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?
13. ಅಳಿಯಾಸೆಗಳ ಸುಳಿಗೆ ಸಿಲುಕಿದರೆ ಮನಸ್ಸು ಹೇಗೆ ತೊಳಲುತ್ತದೆ?
14. ಅಡಿಗರು ಯಾವುದಕ್ಕೆ ಹಗಲಿರುಳು ಹೋರಾಡಬೇಕು ಎಂದಿದ್ದಾರೆ?
15. ತೋಡಿದ ಕೆರೆಗಳು ಯಾವಾಗ ನಿಷ್ಪ್ರಯೋಜಕ ಆಗುತ್ತವೆ?
16. ನೂರು ಯಾಗಗಳನ್ನು ಮಾಡುತ್ತಿದ್ದವರಿಗೆ ಯಾವ ಪದವಿ ದೊರೆಯುತ್ತಿತ್ತು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8X2=16**

17. ಸಾಮಾನ್ಯವಾದ ಲೋಕವರ್ತನೆ ಯಾವುದು ಎಂದು ಅ.ರಾ. ಮಿತ್ರರವರು ಹೇಳುತ್ತಾರೆ?

18. ಪುಟ್ಟರಾಜರು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?

19. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ತರಹದ ಕಪ್ಪುಗಳಿದ್ದವು?

20. ಮಲಗಿದ್ದ ಗೋಪಾಲನನ್ನು ತಾಯಿ ಯಾವ ಮಾತುಗಳಿಂದ ಎಳಿಸಿದಳು?

21. ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?

22. ಅರ್ಜುನನು ಮನದಲಿ ಒಡಲು ಒಡೆವಂತೆ ನಗಲು ಕಾರಣವೇನು?

23. ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದ ವೈದ್ಯರ ಮಾತುಗಳನ್ನು ಕುರಿತು ಬರೆಯಿರಿ.

24. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1X3=3**

25. ಅ.ರಾ. ಮಿತ್ರ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

26. ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ  
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ  
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ  
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ  
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ  
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1X3=3**

27. 'ಸೀತೆಯ ಮುಖ ಕಮಲ ಅರಳಿತು'

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1X3=3**

28. ಆಳಾಗಿ ದುಡಿ ಅರಸನಾಗಿ ಉಣ್ಣು

**ಅಥವಾ**

ಮಾಡಿದ್ದುಣ್ಣೋ ಮಹರಾಯ

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5X3=15**

29. ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ

30. ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ

31. ಈ ಮೇಣದ ಬೊಂಬೆಗಳು ತದ್ರೂಪ ವ್ಯಕ್ತಿಯನ್ನೇ ಹೋಲುತ್ತವೆ

32. ನಮ್ರತೆಗೆ ನಾ ಕರಗುತ್ತೇನೆ

33. ನೆಲಮುಗಿಲ ವಾಲಗವೇ ನಡೆದಂತಿದೆ.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1X4=4**

34. ಏಕಾಂಗಿ ವೀರನಂತೆ ______________________________

______________________________

______________________________

______________________________ ನಡೆದನು.

**ಅಥವಾ**

ಕಾಡು ಕಾಡು ______________________________

______________________________

______________________________

______________________________ ಕಂಡಿತು.

## X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1X4=4

35. 'ಸದ್ದು ಮಾಡದಿರು' ಕವಿತೆಯು ನೀಡುವ ಸಂದೇಶವನ್ನು ನೀವು ಮೆಚ್ಚುವ ಅಂಶಗಳೊಡನೆ ವಿವರಿಸಿ.

**ಅಥವಾ**

'ಸದ್ದು ಮಾಡದಿರು' ಪದ್ಯದಲ್ಲಿರುವ ಮಾನವೀಯ ಮೌಲ್ಯಗಳನ್ನು ಕವಿಯ ಆಶಯದೊಂದಿಗೆ ವಿವರಿಸಿ.

## XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4(2+2)

ನಮಸ್ತೇ ಎನ್ನುತ್ತೇವೆ. ನಮಸ್ಕಾರ ಎನ್ನುತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥವಿಶೇಷತೆ ಏನೆಂದರೆ ನಾವೆಲ್ಲಾ ಆತ್ಮಸ್ವರೂಪರು ಆದ್ದರಿಂದ ನಾವೆಲ್ಲ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಆದ ಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೆ ತಳ್ಳುವುದೇ ಈ ನಮಸ್ಕಾರ ವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು, ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಅದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ಧಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ, ಆತ್ಮೋದ್ಧಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ. ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ಧಾರ ನಮ್ಮ ಕೈಯಲ್ಲೇ ಇದೆ.

36. ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?

ಆ) ನಮಸ್ಕಾರದ ಅರ್ಥವಿಶೇಷತೆಯೇನು?

## XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1X4=4

37. ಜಲಪ್ರವಾಹದಿಂದಾಗುವ ದುಷ್ಪರಿಣಾಮಗಳು

**ಅಥವಾ**

ಕ್ರೀಡೆಗಳ ಮಹತ್ವ

## XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1X5=5

38. ನಿಮ್ಮನ್ನು ಹೊಸಕೋಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ವೆಂಕಟ್' ಎಂದು ಭಾವಿಸಿಕೊಂಡು ನಿಮ್ಮ ನಗರದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವಂತೆ ಕೋರಿ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ವಿಕ್ರಮ್' ಎಂದು ಭಾವಿಸಿಕೊಂಡು ನಿಮ್ಮ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಆಚರಣೆಯ ಕುರಿತು ಬಳ್ಳಾರಿಯ ನಿಮ್ಮ ಸ್ನೇಹಿತೆ 'ಲಕ್ಷ್ಮಿ'ಗೆ ಒಂದು ಪತ್ರ ಬರೆಯಿರಿ.

✦✦✦✦✦